ಒಂಬತ್ತನೆಯದೋ ತಲೆಮಾರಿನವನು ಈತ. ಕಾಳಿಂಗನಿಗೆ ಒಂಬತ್ತು ಜನ ಮಕ್ಕಳು, ಅವರಿಗೆ ಒಬ್ಬೊಬ್ಬರಿಗೂ ಮತ್ತೆ ತಲಾ ಎಂಟು ಹತ್ತು ಮಕ್ಕಳು ಇದ್ದೇ ಇರುತ್ತಿದ್ದವು. ಅವುಗಳಲ್ಲಿ ಒಂದೋ ಎರಡೋ ಹುಟ್ಟುವಾಗಲೋ, ಇಲ್ಲ ಬಾಲ್ಯದಲ್ಲೋ ಸಣ್ಣಪುಟ್ಟ ಕಾಯಿಲೆಗೆ ತೀರಿಕೊಂಡು ಬಿಡುತ್ತಿದ್ದವು. ಮತ್ತೆ ಮುಂದಿನ ಸಂತತಿಗೆ ಮತ್ತೆ ಎಂಟೋ ಹತ್ತೋ... ಹೀಗೆ.

ಸ್ವಾತಂತ್ರ್ಯ ಬಂದು ಇಪ್ಪತ್ತು ಮೂವತ್ತು ವರ್ಷಗಳಾದ ಮೇಲೆ ಊರಿಗೊಂದು ಸ್ಕೂಲು ಅಂತ ಬಂದು ಅವರೆಲ್ಲ ವಿದ್ಯಾಭ್ಯಾಸ ಮಾಡಿಕೊಂಡ ಮೇಲೆಯೇ ಕ್ರಮೇಣ ಮೂರು, ಎರಡು, ಒಂದು ಮಕ್ಕಳಿಗೆ ಸೀಮಿತವಾದದ್ದು. ಅಪ್ಪರೊಳಗೆ ಕಾಳಿಂಗನ ರಕ್ತವನ್ನು ಹಂಚಿಕೊಂಡು ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ಮರಿಮೊಮ್ಮಕ್ಕಳು, ಗಿರಿಮಕ್ಕಳು, ಗಿರಿಮೊಮ್ಮಕ್ಕಳು ಅಂತ ಅವರ ಸಂಖ್ಯೆ ಸಾವಿರವನ್ನು ದಾಟಿಹೋಗಿತ್ತು. ಅವರಿಗೆ ಹೀಗೆ ತಮ್ಮದು ಕಾಳಿಂಗನ ಸಂತತಿ ಎಂಬುದೂ ಗೊತ್ತಿರಲಿಲ್ಲ. ಹೆಚ್ಚೆಂದರೆ ಮುತ್ತಾತನವರೆಗೆ ಮಾತ್ರ ಅರಿವಿರುತ್ತಿದ್ದ ಅವರು, ಮುಂದೆ ಮುಂದೆ ನೋಡಿಕೊಂಡು ಹೋಗುತ್ತಲೇ ಇದ್ದರು. ಆತ ಅವತ್ತು ಮಾಡಿದ್ದ ಆಸ್ತಿಯಲ್ಲಿ ಅನೇಕ ಪೀಸುಗಳಾಗಿ ಕೆಲವರು ಮಾತ್ರ ಉಳಿಸಿಕೊಂಡಿದ್ದು, ಉಳಿದವರು ನಗರ ಪಟ್ಟಣವೆಂತಲೋ, ಅವರವರ ಹೆಂಡತಿಯರ ಮಾತು ಕೇಳಿಕೊಂಡು ಎತ್ತೆತ್ತಲೋ ಹೋಗಿ ನೆಲೆಸಿಬಿಟ್ಟಿದ್ದರು. ಇದು ಒಂಥರ ರಾಜರ ವಂಶದಲ್ಲಿದ್ದಂತೆ... ಒಬ್ಬ ಬಲಶಾಲಿ ರಾಜನಿದ್ದರೆ, ಅವನ ಮಗ ದುರ್ಬಲನಾಗುತ್ತಾನೆ. ಆದರೆ ಆತನ ಮಗ ಮತ್ತೆ ಪ್ರಬಲನಾಗಿ ತನ್ನ ಅಪ್ಪ ಕಳೆದದ್ದನ್ನು ಗಳಿಸುತ್ತಾನೆ... ತನ್ನ ಅಪ್ಪ ಗಳಿಸಿದ್ದನ್ನು ಆತನ ಮಗ ಪುಗಸಟ್ಟೆ ಬಂದದ್ದೆನ್ನುವಂತೆ, ಮಜಾ ಮಾಡಲೇ ಹುಟ್ಟಿರುವೆನೆನ್ನುವಂತೆ ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ಹೀಗೆ ಈ ಆವರ್ತನೆ ಪುನರಾವರ್ತನೆಯಾಗುತ್ತಲೇ ಇರುತ್ತದೆ. ಅದಕ್ಕೇ ಇರಬೇಕು, ಹಿಂದಿನ ಕಾಲದಲ್ಲಿ ತಾತನ ಹೆಸರನ್ನು ಗಂಡುಮಕ್ಕಳಿಗೂ, ಅಜ್ಜಿಯ ಹೆಸರನ್ನು ಹೆಣ್ಣುಮಕ್ಕಳಿಗೂ ಇಟ್ಟು ಕೈತೊಳೆದುಕೊಳ್ಳುತ್ತಿದ್ದರು. ಆಶ್ಚರ್ಯವೆಂದರೆ ಅವು ಹೆಚ್ಚುಕಡಿಮೆ ಅಂಥದೇ ಗುಣವನ್ನು ಪ್ರದರ್ಶಿಸುತ್ತಿದ್ದವು.

ನನ್ನ ಕಣ್ಣೆದುರಿಗೇ ಹುಟ್ಟಿದ ಮಕ್ಕಳು ಕೆಲವೇ ದಿನ, ವರ್ಷಗಳಲ್ಲಿ ಬೆಳೆದು ದೊಡ್ಡವರಾಗಿ, ಅದೇ ಮದುವೆ, ಅದೇ ಸಂಸಾರ, ಅದೇ ಮಕ್ಕಳು ಹೀಗೆ ಎಲ್ಲ ಅದೇ ಅದೆ ಎನ್ನುವಂತೆ ಮುದುಕರಾಗಿ ಸಾಯುತ್ತಿದ್ದರು. ಈ ಹುಡುಗನ ತಾತ ಈ ವಯಸ್ಸಲ್ಲಿ ಹೀಗೇ ಕಾಣುತ್ತಿದ್ದನಲ್ಲ. ಈ ಹುಡುಗಿಯ ಅಜ್ಜಿ ಇದೇ ವಯಸ್ಸಲ್ಲಿ ಹೀಗೆ ಕಾಣುತ್ತಿದ್ದಳಲ್ಲ ಎಂದು ಎಷ್ಟೋ ಸಲ ಅಂದುಕೊಂಡದ್ದಿದೆ. ಅದೇ ಮುಖದ ರೇಖೆ, ಅದೇ ವರ್ಚಸ್ಸು, ಅದೇ ಲಕ್ಷಣ... ಎಂಥ ಆಶ್ಚರ್ಯ ಅಲ್ಲವೇ. ಹೀಗೆ ಕಾಳಿಂಗನ, ತುಂಗೆಯ ಜೀವಕೋಶಗಳು ಮುಂದಿನ ಜನಾಂಗಗಳಲ್ಲಿ ಕಂಡು ಅವರ ಹೆಸರುಗಳ ಬಗ್ಗೆಯೇ ನನಗೆ ಗೊಂದಲ ಉಂಟಾಗುತ್ತಿತ್ತು. ಆದರೆ ನಾನು ಗಮನಿಸಿದ್ದೆಂದರೆ, ಹಾಗೆ ಹುಟ್ಟಿದ ಮಕ್ಕಳ ಮೆದುಳು ಮತ್ತೆ ಸೊನ್ನೆಯಿಂದಲೇ ಆರಂಭವಾಗುತ್ತಿದ್ದುದು. ಮತ್ತೆ ಆಯಾ ವಯಸ್ಸಿಗೆ ತಕ್ಕಂತೆ ಅದರ ವಿಕಸನವಾಗುತ್ತಿದ್ದುದು, ಆಯಾ ವಯಸ್ಸಿಗೆ ಏನೇನು ಮಾಡಬೇಕೋ ಅದನ್ನೇ ಮತ್ತೆ ಮತ್ತೆ ಪುನರಾವರ್ತಿಸುತ್ತಿದ್ದುದು. ನಾನು ಅನೇಕ ಸಲ ಅಂದುಕೊಂಡಿದ್ದೇನೆ. ಆ ಬಲಿತ ಮೆದುಳನ್ನು ಮುಂದಿನ ಜನಾಂಗಕ್ಕೆ ವರ್ಗಾಯಿಸುವಂತಿದ್ದರೆ ಹೇಗಿರುತ್ತಿತ್ತಲ್ಲ ಎಂದು. ಮತ್ತೆ ಮೊದಲಿನಿಂದ ಕಲಿಯುವ ಬದಲು ಅಪ್ಪನ ಅಷ್ಟೂ ಜ್ಞಾನವನ್ನು ಮಗನಿಗೆ, ಆತನಿಗೆ ಬಂದ ಅಷ್ಟೂ ಜ್ಞಾನವನ್ನು ಹಾಗೆಯೇ ಅವನ ಮಗನಿಗೆ, ಹೀಗೆ... ಹಾಗಾಗಿದ್ದಲ್ಲಿ ಇಷ್ಟೊತ್ತಿಗೆ ಎಂತೆಂಥದೋ ಸಂಶೋಧನೆಗಳಾಗಿಬಿಡುತ್ತಿದ್ದವಲ್ಲ?

ಅದು ನೃಪತುಂಗನ ಅಪ್ಪ, ಲೇಖಕ ಯಮುನಪ್ಪನ ಅಪ್ಪ ಕಾಳಿಂಗಯ್ಯನ ಕಾಲ. ಅದು ಸುಮಾರು ಇಪ್ಪತ್ತನೇ ಶತಮಾನದ ಮಧ್ಯದ ದಶಕ. ಆಗ ನಾಟಕಗಳ ಕಂಪನಿಗಳನ್ನು ಕಟ್ಟಿಕೊಂಡು ಒಂದೊಂದು ಊರಲ್ಲೂ ವಾರ, ಹದಿನೈದು ದಿನ, ತಿಂಗಳು ಹೀಗೆ ಆ ಊರಿನ ಗಾತ್ರ, ಜನರ ಆಸಕ್ತಿಯನ್ನು ಆಧರಿಸಿ ಬೇರೆ ಬೇರೆ ನಾಟಕ ಮಾಡುತ್ತಿದ್ದರು. ಎಷ್ಟೋ ನಾಟಕಗಳಿಗೆ ನನ್ನ ಬುಡವೇ ಸ್ಟೇಜ್ ಆಗಿದ್ದುದೂ ಇದೆ. ದಿನಾ ಸಂಜೆ ಏಳುಗಂಟೆಯಿಂದ ಮೂರು ತಾಸಿನಲ್ಲಿ ನಾಟಕವಾಡುತ್ತಿದ್ದರು. ಮತ್ತೆ ಮರುದಿನವೇ ಇನ್ನೊಂದು ನಾಟಕ. ಹಿಂದುಗಡೆ ಪರದೆಗಳಲ್ಲಿ ಅರಮನೆಯ ಚಿತ್ರ, ಕಾಡಿನ ಚಿತ್ರ, ಪ್ರಾಣಿಯ ಚಿತ್ರ, ಉದ್ಯಾನವನದ ಚಿತ್ರ ಹೀಗೆ ತಮ್ಮ ಕಥೆಗೆ ಹೇಗೆ ಬೇಕೋ ಹಾಗೆ ಬಣ್ಣದ ಚಿತ್ರಗಳನ್ನು ಬರೆಸಿಕೊಂಡಿದ್ದು, ನಟರು ಅದೇ ನಿಜವಾದ ಕಾಡು, ಅದೇ ನಿಜವಾದ ಅರಮನೆ ಎನ್ನುವಂತೆ ತಮ್ಮ ನಟನೆಯಲ್ಲಿ ಬಿಂಬಿಸುತ್ತ ಜನರ ಮನಸ್ಸಿನಲ್ಲಿ ಒಂದು ಕಲ್ಪನೆಯನ್ನು ಮೂಡಿಸಿ ಬಿಡುತ್ತಿದ್ದರು. ಈಗಿನ ಸಿನಿಮಾಗಳಿಗೆ ಹೋಲಿಸಿದರೆ ಆ ನಾಟಕವೆಂಬುದೇ ನಿಜವಾದ ಕಲೆ ಎಂದು ಅನ್ನಿಸಿಬಿಡುತ್ತದೆ. ಏಕೆಂದರೆ ಅಲ್ಲಿ ತಪ್ಪುಗಳಿಗೆ ಅವಕಾಶವೇ ಇಲ್ಲ. ಒಂದು ವೇಳೆ ತಪ್ಪು ಮಾಡಿದರೂ ತತ್‌ತಕ್ಷಣವೇ ಇನ್ನೊಂದು ಸಂಭಾಷಣೆಯಿಂದ ಅದನ್ನು ಪ್ರೇಕ್ಷಕನಿಗೆ ಗೊತ್ತಾಗದಂತೆ ಮರೆಮಾಚಿ ತನ್ನ ಪ್ರತಿಭೆಯನ್ನು ಪ್ರದರ್ಶಿಸಿಬಿಡಬೇಕಿತ್ತು.

ಯಮುನಪ್ಪ ಇನ್ನೂ ಸಣ್ಣ ಹುಡುಗನಾಗಿದ್ದಾಗ, ಬಂದಿದ್ದ ಸಿನಿಮಾವನ್ನು ನಗರಕ್ಕೆ ಹೋಗಿ ನೋಡಲೆಂದು ವಾರದ ಮುಂಚಿನಿಂದಲೇ ಲೆಕ್ಕಹಾಕಿ ಎರಡು ಗಾಡಿ ಕಟ್ಟಿಕೊಂಡು, ಹೋಗಿಬರುವವರೆಗೆ ಬೇಕಾದ ಊಟ ತಿಂಡಿಗಳನ್ನೆಲ್ಲ ಕಟ್ಟಿಕೊಂಡು ಮನೆಮಂದಿಯೆಲ್ಲ ಹೋಗಿ ಸಿನಿಮಾ ನೋಡಿಕೊಂಡು ಬಂದಿದ್ದರು. ಹಾಗೆ ನೋಡಿಕೊಂಡು ಬಂದು ತಿಂಗಳಾದರೂ ಬೇಡರ ಕಣ್ಣಪ್ಪನದ್ದೇ ಗುಂಗು. ಆದರೆ ನಂತರದಲ್ಲಿ ಸಿನಿಮಾದ ರುಚಿ ಹತ್ತಿ ಆಗಾಗ್ಗೆ ಹೋಗಿಬರುವುದಕ್ಕೆ ಶುರು ಹಚ್ಚಿಕೊಂಡ ಮೇಲೆ, ಸಿನಿಮಾ ನಟಿಯರು ಪಾವಿತ್ರತೆಯನ್ನು ಹೊಂದಿಲ್ಲವೆಂತಲೂ, ಅವರನ್ನು ನೋಡಿದರೆ ನಮ್ಮ ಹುಡುಗರೂ ಕೆಟ್ಟುಹೋಗುತ್ತಾರೆಂತಲೂ, ಸಿನಿಮಾ ನೋಡುವುದೇ ಮಹಾಪರಾಧ ಎನ್ನುವಂಥ ಅಭಿಪ್ರಾಯವೂ ಸೃಷ್ಟಿಯಾಗಿಬಿಟ್ಟಿತ್ತು. ಯಾವಾಗ ಬಂಗಾರದ ಮನುಷ್ಯ ಸಿನಿಮಾ ಬಂತೋ, ಆಗ ಅದನ್ನು ನೋಡಿಕೊಂಡು ಬಂದ ಯಮುನಪ್ಪ ಮತ್ತೆ ಆತನ ಅಪ್ಪ ಮಾಡಿದ್ದಂತೆ ಗಾಡಿ ಕಟ್ಟಿಕೊಂಡು ಮನೆಮಂದಿಯನ್ನೆಲ್ಲ ಕರೆದುಕೊಂಡು ಹೋಗಿ ಆ ಸಿನಿಮಾ ತೋರಿಸಿದ್ದರು. ಅದೇ ಸಿನಿಮಾ ತೋರಿಸುವ ಹಿಂದೆ ಒಂದು ಸ್ವಾರ್ಥವೂ ಇತ್ತು. ವ್ಯವಸಾಯ ಪ್ರಧಾನವಾಗಿದ್ದ ತಮ್ಮ ಕುಟುಂಬದ ಮಕ್ಕಳು ಮತ್ತು ಹೆಂಗಸರು ಕೃಷಿಯನ್ನು ಇನ್ನಷ್ಟು ಪ್ರೀತಿಸಲಿ, ಗೌರವಯುತವಾಗಿ ಕಾಣಲಿ ಎಂಬುದಾಗಿತ್ತು.

ಅಂಥ ಯಮುನಪ್ಪ ತನ್ನ ಕುಟುಂಬವನ್ನಿಟ್ಟುಕೊಂಡು ತೋಟ, ಗದ್ದೆ ಎಂದು ವ್ಯವಸಾಯ ಮಾಡಿಕೊಂಡೇ ಸಾಹಿತ್ಯದ ಕೃಷಿಯನ್ನೂ ಮಾಡುತ್ತಿದ್ದರು. ಇತ್ತೀಚೆಗೆ ಎರಡು ಮೂರು ಬಾರಿ ಜ್ಞಾನಪೀಠಕ್ಕೆ ಅವರ ಹೆಸರು ಶಿಫಾರಸ್ಸಾಗಿದ್ದರೂ ಜಾತಿ, ರಾಜಕೀಯದ ಬೆಂಬಲವಿಲ್ಲದೇ ಮತ್ತು ಅಂಥದೊಂದು ಲಾಬಿ ಮಾಡಲು ತಾಕತ್ತಿಲ್ಲದೇ ಇನ್ನೇನು ಇವತ್ತೋ ನಾಳೆಯೋ ಸಾಯಬೇಕೆಂದು ದೇಹ ಹೇಳುತ್ತಿದ್ದರೂ, ಸತ್ತರೆ ಆ ಪ್ರಶಸ್ತಿಯ ನಿಯಮದಂತೆ ಪ್ರಶಸ್ತಿ ಸಿಗುವುದಿಲ್ಲವಲ್ಲ ಎಂಬ ಸಂದಿಗ್ಧದಲ್ಲಿ ಸಾಯಲೂ ಆಗದೆ ಬದುಕಲೂ ಆಗದೇ ಒದ್ದಾಡುತ್ತಿದ್ದರು. ಹೇಗಾದರೂ ಮಾಡಿ ಇಂಥದೊಂದು ಪ್ರಶಸ್ತಿಯನ್ನು ತನಗಲ್ಲದಿದ್ದರೂ ಕನ್ನಡಕ್ಕಾಗಿಯಾದರೂ ಕೊಡಿಸಬೇಕೆಂದು ಅವರು ಒದ್ದಾಡುತ್ತಿದ್ದರು. ಹಿಂದೆಲ್ಲ ಹೀಗೇ ಆಗಿ ಪುತಿನ, ಅಡಿಗ, ಲಂಕೇಶ್, ತೇಜಸ್ವಿ ಇವರಿಗೆಲ್ಲ ಸಲ್ಲಬೇಕಾಗಿದ್ದ ಪ್ರಶಸ್ತಿ ಸಲ್ಲಲಿಲ್ಲವಲ್ಲ, ಇನ್ನು ಈ ಹಂತದವರೆಗೆ ಬಂದು ಹಾಗೇ ಬಿಟ್ಟರೆ ಅದು ತನಗೆ ಮಾತ್ರವಲ್ಲ ಇಡೀ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮಾಡಿದ ಅಪಚಾರವಾಗುತ್ತದೆಂದು ಅವರಾದರೂ ಭಾವಿಸಿದ್ದರು.

ಅಪ್ಪರೊಳಗೆ ನನ್ನನ್ನು ಕಡಿದು ಸಪಾಟುಗೊಳಿಸಲು ಬಿಡದೇ ಒಗ್ಗಟ್ಟಾಗಿದ್ದ ಜನ, ತಮ್ಮ ಮನೆಗಳ ಮುಂಭಾಗವನ್ನು ತೆರವುಮಾಡಿ ಹಿಂದೆ ಸರಿದುಕೊಂಡು ರಸ್ತೆ ಅಗಲೀಕರಣಕ್ಕೆ ಅವಕಾಶ ಮಾಡಿಕೊಟ್ಟಿದ್ದರು. ನನ್ನ ಅಕ್ಕಪಕ್ಕದಲ್ಲಿ ಪೂರ್ವಪಶ್ಚಿಮಕ್ಕೆ ಹಾದು ಹೋಗಿದ್ದ ಎರಡು ರಸ್ತೆಗಳು, ಮತ್ತು ಉತ್ತರದಕ್ಷಿಣಕ್ಕೆ ಹಾದು ಹೋಗಿದ್ದ ಇನ್ನೆರಡು ರಸ್ತೆಗಳು ಒಂದರೊಳಗೊಂದು ರಂಗೋಲಿಯಂತೆ ಸೇರಿಕೊಂಡಿದ್ದವು. ಅದರ ಮಧ್ಯೆ ನನ್ನನ್ನು ಕೇಂದ್ರ ಬಿಂದುವಾಗಿಸಿಕೊಂಡು, ನನ್ನನ್ನೇ ವೃತ್ತದ ಥರ ಸುತ್ತುವಂತೆ ಮಾಡಿಕೊಂಡಿದ್ದರು. ನನ್ನ ಕಟ್ಟೆಯ ಪಕ್ಕಕ್ಕೇ ಟ್ರಾಫಿಕ್ ಸಿಗ್ನಲ್‌ನ ಕಂಬಗಳನ್ನು ನೆಟ್ಟು ನಾಲ್ಕೂ ಕಡೆಯ ವಾಹನಗಳನ್ನು, ಓಡಾಡುವ ಜನರನ್ನೂ ಪೊಲೀಸರು ನಿಯಂತ್ರಿಸುತ್ತಿದ್ದರು. ಪುಣ್ಯಕ್ಕೆ ರೈಲು ದಾರಿ ಅಲ್ಲಿಂದ ದೂರವಿದ್ದುದರಿಂದ ಇಲ್ಲಿಯವರೆಗೆ ಬಚಾವಾಗಿದ್ದೆ. ಇಲ್ಲವೆಂದಿದ್ದರೆ ರೈಲ್ವೇಗೇಟನ್ನು ಮುಚ್ಚುವ ಕಾಲವನ್ನು ಸಹಿಸಲಾರದೇ ಜನರೇ ರೊಚ್ಚಿಗೆದ್ದು